**ಸಾಕ್ಷಿಯನ್ನು ದಿಃ 05.11.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದಃ**

ನಾನು ಬಿ.ಎ ಓದಿರುತ್ತೇನೆ. ನನ್ನ ಹೆಂಡತಿ ಸಾಲಿಗ್ರಾಮ ಆಸ್ಪತ್ರೆಯಲ್ಲಿ ನರ್ಸ್. ಅಪಘಾತದ ಸ್ಥಳದಿಂದ ಸಾಲಿಗ್ರಾಮ 15 ಕಿ.ಮೀ ಇದೆ. ಅಕ್ಕಿಹೆಬ್ಬಾಳಿಗೆ ಅಂದಾಜು 1 ಕಿ.ಮೀ ಇದೆ. ಅಕ್ಕಿಹೆಬ್ಬಾಳಿನಲ್ಲಿ ಆಸ್ಪತ್ರೆ ಇದೆ. ಅಪಘಾತ ಸ್ಥಳದಿಂದ ಬೇರ್ಯ 6 ಕಿ.ಮೀ ಇದೆ. ಅಲ್ಲು ಆಸ್ಪತ್ರೆ ಇದೆ ಎಂದರೆ ಸರಿ. ಕೆ.ಆರ್. ಪೇಟೆ 15 ಕಿ.ಮೀ ದೂರದಲ್ಲಿದೆ. ನಿಆರ್. 1 ರಲ್ಲಿ ಸಮಯವನ್ನು ನಮೂದಿಸಿದ ಜಾಗದಲ್ಲಿ ತಿದ್ದಿದ್ದಾರೆ ಎಂದರೆ ಸರಿಯಲ್ಲ. ಸಮಯದ ಸ್ಥಳದಲ್ಲಿ 06.07p.m ನಿಮಿಷದಿಂದ 08.00 p.m ಎಂದು ಬರೆದಿದ್ದಾರೆ. ಸಾಕ್ಷಿ ಮುಂದುವರೆದು 8.00 ಗಂಟೆ ಅಲ್ಲ 30 ಎಂದು ನಮೂದಿಸಿರುತ್ತಾರೆ ಎನ್ನುತ್ತಾರೆ. ನಿಆರ್. 1 ರಲ್ಲಿ ಎಂ.ಎಲ್.ಸಿ. ಎಂದು ನಮೂದಿಸಿದ್ದು ಪೋಲೀಸರು ನಿಮ್ಮ ಹೇಳಿಕೆ ಪಡೆದಿದ್ದಾರಾ ಎಂದರೆ ಇಲ್ಲ ಎನ್ನುತ್ತಾರೆ. ನನ್ನ ಹೆಂಡತಿ ನಿಆರ್. 1 ಅನ್ನು ನೀಡಿರುವ ಆಸ್ಪತ್ರೆಯಲ್ಲಿ ನರ್ಸ್ ಆಗಿರುವ ಕಾರಣ ನಾನು ನಿಆರ್. 1 ದಾಖಲೆಯನ್ನು ಸೃಷ್ಠಿಸಿಕೊಂಡು ಪರಿಹಾರದಿಂದ ತಪ್ಪಿಸಿಕೊಳ್ಳಲು ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮೇಲಿನ ಕ್ರಿಮಿನಲ್ ಪ್ರಕರಣವನ್ನು ದಂಡ ಪಾವತಿಸಿದ ಕಾರಣ ಮುಕ್ತಾಯಗೊಳಿಸಿದ್ದಾರೆ. ನನ್ನ ಅಜಾಗರೂಕತೆಯಿಂದ ಅಪಘಾತ ಆದ ಕಾರಣ ನಾನು ತಪ್ಪೊಪ್ಪಿಕೊಂಡು ಕ್ರಿಮಿನಲ್ ಪ್ರಕರಣವನ್ನು ಮುಕ್ತಾಯಗೊಳಿಸಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಅರ್ಜಿದಾರರ ತಪ್ಪಿನಿಂದ ಆಗಿಲ್ಲ, ಪರಿಹಾರ ನೀಡಲು ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಆರ್. 1 ಅನ್ನು ಸೃಷ್ಠಿಸಿಕೊಂಡು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರರ ತಪ್ಪಿದೆ ಎಂದು ನೀವು ದೂರು ನೀಡಿದ್ದೀರಾ ಎಂದರೆ ಸಾಕ್ಷಿಯು ನಾನು ಆಸ್ಪತ್ರೆಯಲ್ಲಿದ್ದ ಕಾರಣ ಆನಂತರ ದೂರು ನೀಡಲು ಹೋದಾಗ ತಡವಾಗಿದೆ ಎಂದು ತೆಗೆದುಕೊಂಡಿಲ್ಲ ಎನ್ನುತ್ತಾರೆ. ನಾನು 17 ದಿನ ಪ್ರತಿದಿನ ಆಸ್ಪತ್ರೆಗೆ ತೋರಿಸುಕೊಳ್ಳುತಿದ್ದೆ ಒಳರೋಗಿಯಾಗಿ ದಾಖಲಾಗಿಲ್ಲ. ಆ ಬಗ್ಗೆ ದಾಖಲಾತಿಗಳನ್ನು ಹಾಜರು ಪಡಿಸಬಹುದು. ನಾನು

ಯಾವುದೇ ಚಿಕಿತ್ಸೆ ಪಡೆಯದೇ ಇದ್ದರೂ ಪರಿಹಾರ ಪಡೆಯಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.